ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 18–12–2019

## ಪತ್ರಿಕಾ ಆಮಂತ್ರಣ

1. ಕರ್ನಾಟಕ ಜೀವವೈವಿಧ್ಯ ಮಂಡಳಿಯ ರಾಜ್ಯದ ಜೀವಸಂಕುಲ ಕುರಿತು ನಡೆಸಿರುವ ಹಲವು ಅಧ್ಯಯನ ವರದಿ ಹಾಗೂ ವಿಶೇಷ ಪುಸ್ತಿಕೆಗಳ ಲೋಕಾರ್ಪಣೆ ಕಾರ್ಯಕ್ರಮ

ಕೃತಿಗಳ ಬಿಡುಗಡೆ:

ಶ್ರೀ ಬಿ.ಎಸ್. ಯಡಿಯೂರಪ್ಪ,
ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ.

ಮುಖ್ಯ ಅತಿಥಿ:

ಶ್ರೀ ಸಿ.ಸಿ. ಪಾಟೀಲ,
ಅರಣ್ಯ, ಪರಿಸರ ಸಚಿವರು

ದಿನಾಂಕ: 19–12–2019, ಗುರುವಾರ ಸಮಯ ಬೆಳಿಗ್ಗೆ 11.00 ಗಂಟೆಗೆ
ಸ್ಥಳ: ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾ, ಕುಮಾರಕೃಪಾ ರಸ್ತೆ, ಬೆಂಗಳೂರು.

2. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವತಿಯಿಂದ 2019 ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಹಾಗೂ 2018 ನೇ ಸಾಲಿನ ಪುಸ್ತಕ ಬಹುಮಾನ ವಿತರಣೆ ಸಮಾರಂಭ:

ಗೌರವ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಣೆ:

ಶ್ರೀ ಸಿ. ಟಿ. ರವಿ,
ಕನ್ನಡ ಮತ್ತು ಸಂಸ್ಕೃತಿ ಪ್ರವಾಸೋದ್ಯಮ ಹಾಗೂ ಸಕ್ಕರೆ ಸಚಿವರು,

ಮುಖ್ಯ ಅತಿಥಿಗಳು:

ಡಾ. ಎಂ. ಚಿದಾನಂದಮೂರ್ತಿ,
ಖ್ಯಾತ ಸಾಹಿತಿಗಳು,
ಸಂಶೋಧಕರು ಹಾಗೂ ವಿಮರ್ಶಕರು.

ಶ್ರೀ ಎಸ್. ರಂಗಪ್ಪ, ಕ.ಆ.ಸೇ
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

<u>ಅಧ್ಯಕ್ಷತೆ:</u>

ಡಾ. ಅಜಕ್ಕಳ ಗಿರೀಶ ಭಟ್,
ಅಧ್ಯಕ್ಷರು,
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ.

ದಿನಾಂಕ: 19-12-2019, ಗುರುವಾರ ಸಮಯ : ಸಂಜೆ 5.30 ಗಂಟೆಗೆ

ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರಿ-ಖಾಸಗಿ ಕಂಪನಿಗಳ ಸಹಭಾಗಿತ್ವದ ಕುರಿತು ಸಮಗ್ರ ಚರ್ಚೆ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಅತ್ಯಂತ ಕೆಳಮಟ್ಟದಲ್ಲಿ ಗುರುತಿಸಿಕೊಂಡಿರುವ ಕರ್ನಾಟಕದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಸಾಧಿಸುವಲ್ಲಿ ಸರ್ಕಾರದ ಯೋಜನೆಗಳ ಜೊತೆ ಖಾಸಗಿ ಕಂಪನಿಗಳು ಸಹ ಕೈಜೋಡಿಸಿದಲ್ಲಿ ಅಭಿವೃದ್ಧಿ ಸಾಧಿಸಬಹುದು ಎಂದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಇಂದು ವಿಕಾಸಸೌಧದಲ್ಲಿ ಹಮ್ಮಿಕೊಂಡಿದ ಮಹತ್ವಕಾಂಕ್ಷಿ ಜಿಲ್ಲೆಗಳಾದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಮಗ್ರ ಅಭಿವೃದ್ಧಿ ಪ್ರಾಧಿಕಾರ, ಸರ್ಕಾರಿ ಮತ್ತು ಖಾಸಗಿ ಒಡೆತನದ ಕಂಪನಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಸದರಿ ಜಿಲ್ಲೆಗಳ ಸಮಗ್ರ ಅಭಿವೃದ್ಧಿ ಸಾಧಿಸಲು ಖಾಸಗಿ ಕಂಪನಿಗಳ ತಂತ್ರಜ್ಞಾನ, ವಿಜ್ಞಾನ

ಹಾಗೂ ಸಹಭಾಗಿತ್ವ ಪ್ರಸ್ತುತ ಇರುವ ಸರ್ಕಾರದ ಯೋಜನೆಗಳ ಜೊತೆ ಕೈಜೋಡಿಸಿದಾಗ ಅತ್ಯಂತ ವೇಗವಾಗಿ ಮತ್ತು ಗುಣಮಟ್ಟದ ಅಭಿವೃದ್ಧಿಯನ್ನು ಸಾಧಿಸಬಹುದು ಎಂದರು.

ಖಾಸಗಿ ಕಂಪನಿಗಳ ಸಾಮಾಜಿಕ ಜವಾಬ್ದಾರಿ ಅಡಿಯಲ್ಲಿ ತಮ್ಮಲ್ಲಿರುವ ಮಾನವ ಸಂಪನ್ಮೂಲ ಹಾಗೂ ಆರ್ಥಿಕ ಸಂಪನ್ಮೂಲ ಕ್ರೋಢಿಕರಿಸಿ ಇಲಾಖಾವಾರು ತಮಗೆ ಸಂಬಂಧಿಸಿದ ಕೆಲಸಗಳಲ್ಲಿ ಕೈಜೋಡಿಸಬಹುದಾಗಿದ್ದು, ಮಾನವ ಅಭಿವೃದ್ಧಿ ಸೂಚ್ಯಂಕದಡಿಯಲ್ಲಿ ಅಗತ್ಯವಿರುವ ಅಂಶಗಳನ್ನು ಪಟ್ಟಿಮಾಡಿ, ಎಲ್ಲರ ಸಹಭಾಗಿತ್ವದಲ್ಲಿ ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳಾದ ಕುಮಾರನಾಯಕ್ ಅವರು ಮಾತನಾಡಿ ಈ ಹಿಂದೆ ಅವರು ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳಾಗಿದ್ದ ಅವಧಿಯಲ್ಲಿ ಇದ್ದ ರಾಯಚೂರು ಜಿಲ್ಲೆಗೂ ಈಗ ತಾವೇ ಉಸ್ತುವಾರಿ ಹೊಂದಿರುವ ರಾಯಚೂರು ಜಿಲ್ಲೆಗೂ ಯಾವುದೇ ವ್ಯತ್ಯಾಸವಿಲ್ಲದಿರುವುದು ಅತ್ಯಂತ ಶೋಚನೀಯ ಸಂಗತಿ. ಜಿಲ್ಲೆಯಲ್ಲಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳು ಹರಿಯುತ್ತಿದ್ದರು ಸಹ ಕೃಷಿಯಲ್ಲಿ ಅಭಿವೃದ್ಧಿ ಕಾಣದಿರುವುದಕ್ಕೆ ಕಾರಣಗಳನ್ನು ಹುಡುಕುವ ಅವಶ್ಯಕತೆ ಇದೆ ಎಂದು ಹೇಳಿದರು.

ಸಭೆಯಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿಗಳಲ್ಲಿ ಮುಖ್ಯವಾಗಿ ಬಡತನ ನಿರ್ಮೂಲನೆ, ಹಸಿವು ಮುಕ್ತ, ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ, ಗುಣಮಟ್ಟದ ಶಿಕ್ಷಣ, ಲಿಂಗ ಸಮಾನತೆ, ಸ್ವಚ್ಚ ನೀರು ಮತ್ತು ನೈರ್ಮಲ್ಯ, ಅಗ್ಗವಾದ ಮತ್ತು ಶುದ್ಧಶಕ್ತಿ, ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ, ಉದ್ಯಮ ಅವಿಷ್ಕಾರ ಮತ್ತು ಮೂಲಸೌಕರ್ಯಗಳು, ಅಸಮಾನತೆಗಳ ಇಳಿಕೆ, ಸುಸ್ಥಿರ ನಗರಗಳು ಮತ್ತು ಸಮುದಾಯಗಳು, ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆ, ಹವಾಮಾನ ಬಗ್ಗೆ ಕ್ರಮ, ಜಲದ ಜೀವರಾಶಿ, ಭೂಮಿ ಮೇಲಿನ ಜೀವರಾಶಿ, ಶಾಂತಿ, ನ್ಯಾಯ ಮತ್ತು ಸದೃಡ ಸಂಸ್ಥೆಗಳು ಕುರಿತಂತೆ ಗುರಿಮುಟ್ಟಲು ಅವಶ್ಯವಿರುವ ಅಂಶಗಳು ಮತ್ತು ಸಹಭಾಗಿತ್ವದ ಬಗ್ಗೆ ಚರ್ಚಿಸಲಾಯಿತು.

ಸರ್ಕಾರದ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು, ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಅಧಿಕಾರಿಗಳು ಸೇರಿದಂತೆ 50 ಕ್ಕೂ ಹೆಚ್ಚಿನ ಖಾಸಗಿ ಕಂಪನಿಗಳು ಮತ್ತು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು.

## ಸಚಿವರ ಪ್ರವಾಸ

ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)

ವಸತಿ, ತೋಟಗಾರಿಕೆ ಮತ್ತು ರೇಷ್ಮೆ ಸಚಿವರು ಹಾಗೂ ಮೈಸೂರು ಮತ್ತು ಮಡಿಕೇರಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ವಿ. ಸೋಮಣ್ಣ ಅವರು ಡಿಸೆಂಬರ್ 23 ಮತ್ತು 24 ರಂದು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಡಿಸೆಂಬರ್ 24 ರಂದೇ ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ.

ಅಲ್ಲದೆ, ಡಿಸೆಂಬರ್ 30 ರಂದು ಸಚಿವರು ಮೈಸೂರು ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡು, ಅದೇ ದಿನ ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ.

## ಡಿಸೆಂಬರ್ 23 ಮತ್ತು 24 ರಂದು
## ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆ

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ, ನವದೆಹಲಿ ಇವರು ಡಿಸೆಂಬರ್ 23 ಮತ್ತು 24 ರಂದು ರಾಜ್ಯ ಮಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಿದೆ.

ಈ ಸಭೆಯಲ್ಲಿ ಪರಿಶಿಷ್ಟ ಜಾತಿಯವರ ಸರ್ವತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರ ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಂಡಿರುವ ಪ್ರಮುಖ ಯೋಜನೆಗಳ ಕುರಿತು ಚರ್ಚಿಸಲಿದೆ.

ರಾಷ್ಟ್ರೀಯ ಜಾತಿಗಳ ಆಯೋಗದ ನಿಯೋಗವು **Prof (Dr) Ram Shankar Kathereia, Hon'ble Chairman, Dr. Murugan, Hon'ble Vice-Chairman, Shri K. Ramulu, Dr. Yogendra Paswan, Dr (Ms) Swaraj Vidwan, Hon'ble Members, Shri Pritam Singh, Secretary, Dr. Smita S, Chudhri, Joint Secretary and Shri Anurag Tyagi, APS to Hon'ble Chairman** ಇವರುಗಳನ್ನು ಒಳಗೊಂಡಿರುತ್ತದೆ ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಕಟಣೆ ತಿಳಿಸಿದೆ.

## ಮನೆಯಂಗಳದಲ್ಲಿ ಮಾತುಕತೆಯಲ್ಲಿ
## ಅತಿಥಿಯಾಗಿ ಅರಳಿ ನಾಗರಾಜ

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿಸೆಂಬರ್ 21 ರ ಶನಿವಾರದಂದು ಸಂಜೆ 4–00 ಗಂಟೆಗೆ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ನಡೆಯಲಿರುವ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಕರ್ನಾಟಕ ಉಚ್ಛ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ಶ್ರೀ ಅರಳಿ ನಾಗರಾಜ ಅವರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

**ಕೃಷಿ ಉತ್ಪಾದನೆಯಲ್ಲಿ ಸ್ವಾವಲಂಬನೆಯ ಸಾಧನೆ**

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)**

ಕೃಷಿ ಉತ್ಪಾನೆಯು ಕೃಷಿಯ ಚಟುವಟಿಕೆಗಳ ವಿವಿಧ ಹಂತಗಳಲ್ಲಿ ಬಳಸುವ ಅನೇಕ ರೀತಿಯ ಪರಿಕರಗಳ ಮೇಲೆ ಅವಲಂಬಿತವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ನಮ್ಮ ದೇಶವು ಕೃಷಿಯ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿದ್ದು, ಗುಣಮಟ್ಟದ ಆಹಾರ ಉತ್ಪಾದನೆಗೆ ಹೆಚ್ಚಿನ ಬೇಡಿಕೆಯೊಂದಿಗೆ ಅನಿವಾರ್ಯತೆಯೂ ಎದುರಾಗಿದೆ.

ಕೃಷಿಯಲ್ಲಿ ಬಳಕೆಯಾಗುವ ರಸಗೊಬ್ಬರ, ಜೈವಿಕ ಗೊಬ್ಬರ ಮತ್ತು ಸಾವಯವ ಗೊಬ್ಬರಗಳು ಹಾಗೂ ಜೈವಿಕ ಮತ್ತು ರಾಸಾಯನಿಕ ಪೀಡೆನಾಶಕಗಳ ನಿಯಂತ್ರಣವನ್ನು ಕ್ರಮವಾಗಿ ರಸಗೊಬ್ಬರ ನಿಯಂತ್ರಣ ಆದೇಶ, 1985 ಹಾಗೂ ಕೀಟನಾಶಕ ಕಾಯ್ದೆ, 1968 ರನ್ವಯ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಮೂಲಕ ಜಾರಿಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಜೈವಿಕ ಹೆಸರಿನ ಕೃಷಿ ಪರಿಕರಗಳಲ್ಲಿ ಪೀಡೆನಾಶಕಗಳನ್ನು ಮಿಶ್ರಣ ಮಾಡಿ ಮಾರಾಟ ಮಾಡುತ್ತಿರುವ ಹಿನ್ನಲೆಯಲ್ಲಿ, ಕೃಷಿ ಇಲಾಖೆಯ ಅಧಿಕಾರಿಗಳು ಮತ್ತು ಕೃಷಿ ಇಲಾಖೆಯ ಜಾಗೃತ ದಳದ ಅಧಿಕಾರಿಗಳ ಮುಂದಾಳತ್ವದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕೃಷಿ ನಿರ್ದೇಶಕರುಗಳ ನೇತೃತ್ವದಲ್ಲಿ ತಂಡಗಳನ್ನು ರಚಿಸಿ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮಾರಾಟ ಮಳಿಗೆಗಳನ್ನು ಅನಿರೀಕ್ಷಿತವಾಗಿ ತಪಾಸಣೆ ನಡೆಸಿ, ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ, ವಿಶ್ಲೇಷಣೆಗೆ ಒಳಪಡಿಸಿರುವ ಮಾದರಿಗಳಲ್ಲಿ ಒಂದಕ್ಕಿಂತ ಹೆಚ್ಚಿನ ಪೀಡೆನಾಶಕಗಳನ್ನು ಶಿಫಾರಸ್ಸಿಲ್ಲದ ಪ್ರಮಾಣದಲ್ಲಿ ಕಲಬೆರಕೆ ಮಾಡಿರುವುದು ಕಂಡು ಬಂದಿರುತ್ತದೆ.

ಈ ಸಂಬಂಧ ಕೀಟನಾಶಕ ಕಾಯ್ದೆಯಡಿ ನೊಂದಣಿಯಾದ ಪೀಡೆನಾಶಕಗಳನ್ನು ಕಲಬೆರಕೆ ಮಾಡಿ ಮಾರಾಟ ಮಾಡುತ್ತಿರುವ ಮಾರಾಟಗಾರರಿಗೆ ಕಾಯ್ದೆಯನ್ನವಯ ನೋಟೀಸ್ ಜಾರಿ ಮಾಡಿ ಮಾರಾಟ ಪರವಾನಗಿಯನ್ನು ಮಂಡ್ಯ, ದಾವಣಗೆರೆ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಅಮಾನತ್ತು ಮಾಡಲಾಗಿರುತ್ತದೆ ಮತ್ತು ಇತರೇ ಜಿಲ್ಲೆಗಳಲ್ಲಿಯೂ ಸಹ ಪರಿಶೀಲನೆ ಪ್ರಗತಿಯಲ್ಲಿದ್ದು, ಕಾನೂನು ಉಲ್ಲಂಘನೆಯ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ.

ಕಾಯ್ದೆಯಡಿ ನೊಂದಣಿಯಾದ ಮತ್ತು ಇಲಾಖೆಯಿಂದ ಅನುಮತಿ ಪಡೆದು ಅಧಿಕೃತವಾಗಿ ತಯಾರು ಮಡಲಾಗುತ್ತಿರುವ ತಯಾರಕರ ಅಥವಾ ಮಾರಾಟ ಮಾಡುತ್ತಿರುವ ಮಾರಾಟಗಾರರಿಂದ ಮಾತ್ರ ಕೃಷಿ ಪರಿಕರಗಳನ್ನು ಖರೀದಿಸಲು ಎಲ್ಲಾ ರೈತರಿಗೆ ಹಾಗೂ ಪರಿಕರ ಮಾರಾಟಗಾರರಿಗೆ ಅನೇಕ ಬಾರಿ ಸಲಹೆಗಳನ್ನು ನೀಡಿ ಅರಿವು ಮೂಡಿಸಲಾಗುತ್ತಿರುತ್ತದೆ.

ಶಿಫಾರಸ್ಸು ಮಾಡಿರದ ಪ್ರಮಾಣದಲ್ಲಿ ರಾಸಾಯನಿಕ ಪೀಡೆನಾಶಕಗಳನ್ನು ಮಿಶ್ರಣ ಮಡಿ ಜೈವಿಕ ಹೆಸರಿನಡಿ ಮಾರಾಟ ಮಾಡುತ್ತಿರುವುದರಿಂದ ಕೀಟ/ರೋಗಗಳು ಪೀಡೆನಾಶಕಗಳಿಗೆ ನಿರೋಧಕತೆಯನ್ನು

ಬಹು ಬೇಗನೆ ಹೊಂದಲು ಕಾರಣವಾಗುತ್ತದೆ. ಜೈವಿಕ ವಸ್ತುಗಳೆಂದು ರಾಸಾಯನಿಕ ಪೀಡೆನಾಶಕಗಳನ್ನು ಮಿಶ್ರಣ ಮಾಡಿ ಮಾರಾಟ ಮಾಡುತ್ತಿರುವ ವಸ್ತುಗಳನ್ನು ಸಾವಯವ ಬೆಳೆಗಾರರು/ರೈತರು ಯಥೇಚ್ಚವಾಗಿ ಬಳಕೆ ಮಾಡುವುದರಿಂದ ವ್ಯವಸ್ಥೆ ಮೇಲೆ ಪ್ರತಿಕೂಲ ಪರಿಣಾಮವಾಗುವುದಲ್ಲದೆ ಸಾವಯವ ಉತ್ಪನ್ನಗಳಲ್ಲಿ ರಾಸಾಯನಿಕ ಅಂಶಗಳ ಬಳಕೆಯಿಂದ ಅನೇಕ ರೀತಿಯ ಮಾರಣಾಂತಿಕ ಆರೋಗ್ಯಕರ ಸಮಸ್ಯೆಗಳನ್ನು ತಂದೊಡ್ಡುವುದಲ್ಲದೆ, ಗ್ರಾಹಕರಲ್ಲಿ ನೈಜವಾದ ಸಾವಯವ ಉತ್ಪನ್ನಗಳ ಬಗ್ಗೆ ಅಪನಂಬಿಕೆ ಉಂಟಾಗುತ್ತದೆ.

ಈ ಹಿನ್ನೆಲೆಯಲ್ಲಿ ರೈತರು/ಗ್ರಾಹಕರು ಕೃಷಿ ಪರಿಕರಗಳನ್ನು ಖರಿದಿಸುವ ಮುನ್ನ ಕೆಳಕಂಡಂತೆ ಜಾಗೃತಾ ಕ್ರಮಗಳನ್ನು ವಹಿಸುವುದು ಸೂಕ್ತವಾಗಿರುತ್ತದೆ.

1. ಕಾಯ್ದೆಯಡಿ ನೊಂದಣಿಯಾದ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ ಮತ್ತು ಸಾವಯವ ಪೀಡೆನಾಶಕಗಳನ್ನು ಖರೀದಿಸುವುದು.
2. ಅಧಿಕೃತವಾಗಿ ಇಲಾಖೆಯಿಂದ ತಯಾರಿಕೆ/ಮಾರಾಟ ಪರವಾನಗಿ ಪಡೆದಿರುವ ಮಾರಾಟಗಾರರಿಂದ ಕೃಷಿ ಪರಿಕರಗಳನ್ನು ಖರೀದಿಸುವುದು.
3. ಜೈವಿಕ ಹೆಸರಿನಡಿ ಪೀಡೆನಾಶಕಗಳನ್ನು ಮಿಶ್ರಣ ಮಾಡಿ ತಯಾರಿಕೆ/ಮಾರಾಟ ಮಾಡುತ್ತಿರುವ ಬಗ್ಗೆ ಅನುಮಾನ ಕಂಡುಬಂದಲ್ಲಿ ಇಲಾಖೆಯ ಅಧಿಕಾರಿಗಳಿಗೆ ಮಾಹಿತಿಯನ್ನು ನೀಡುವುದು.
4. ಜೈವಿಕ ಕೃಷಿ ಪರಿಕರಗಳ ಕುರಿತು ಯಾವುದಾದರೂ ದೂರುಗಳು ಇದ್ದಲ್ಲಿ ರೈತ ಸಹಾಯವಾಣಿ ದೂರವಾಣಿ ಸಂಖ್ಯೆ 1800–425–3553 ಕ್ಕೆ ಸಲ್ಲಿಸಬಹುದು ಎಂದು ಕೃಷಿ ಇಲಾಖೆ ಪ್ರಕಟಣೆ ತಿಳಿಸಿದೆ.

**ಸಚಿವರ ಪ್ರವಾಸ**

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ)**

ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಸಕ್ಕರೆ ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಸಿ. ಟಿ. ರವಿ ಅವರು ಡಿಸೆಂಬರ್ 19 ರಂದು ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು, ಅದೇ ದಿನ ಕೇಂದ್ರಸ್ಥಾನಕ್ಕೆ ಹಿಂದಿರುಗಲಿದ್ದಾರೆ.

*ಛಾಯಾಚಿತ್ರ ಲಗತ್ತಿಸಿದೆ)*

*18.12.2019ರಂದು ಉತ್ತರಾಖಂಡ್ ರಾಜ್ಯದ ಡೆಹರಾಡೂನ್‌ನಲ್ಲಿ,* ***ಲೋಕಸಭೆಯ*** *ಸನ್ಮಾನ್ಯ* ***ಸಭಾಧ್ಯಕ್ಷರಾದ ಶ್ರೀ ಓಂ ಬಿರ್ಲಾರವರ ಅಧ್ಯಕ್ಷತೆಯಲ್ಲಿ*** *ನಡೆಯುತ್ತಿರುವ* ***"79ನೇ ಅಖಿಲ ಭಾರತ ಶಾಸಕಾಂಗ ಸಂಸ್ಥೆಗಳ ಪೀಠಾಸೀನಾಧಿಕಾರಿಗಳ ಸಮ್ಮೇಳನ"****ದಲ್ಲಿ ಕರ್ನಾಟಕ ವಿಧಾನಸಭೆಯ ಸನ್ಮಾನ್ಯ*

*ಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿಯವರು **"Strengthening Parliamentary Democracy and Capacity Building through in House Devices Including Zero Hour"** ಎಂಬ ವಿಷಯದ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ತಮ್ಮ ನಿಲುವನ್ನು ಮಂಡಿಸಿರುತ್ತಾರೆ.*

## ಕನ್ನಡ ಪುಸ್ತಕ ಪ್ರಾಧಿಕಾರದ 2018ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿ ಪ್ರಕಟ

ಬೆಂಗಳೂರು - ಡಿಸೆಂಬರ್ 18 - ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ನೀಡಲಾಗುವ ವಾರ್ಷಿಕ ಪ್ರಶಸ್ತಿಗಳ ಆಯ್ಕೆ ಸಮಿತಿ 2018ನೇ ಸಾಲಿನ ವಿವಿಧ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಮುಗಿಸಿದ್ದು, **ಅಭಿನವ ಪ್ರಕಾಶನಕ್ಕೆ ಅತ್ಯುತ್ತಮ ಪ್ರಕಾಶನ ಪ್ರಶಸ್ತಿ** ಪಡೆದಿದೆ ಎಂದು ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಎಂ.ಎನ್. ನಂದೀಶ್ ಹಂಚೆ ತಿಳಿಸಿದ್ದಾರೆ.

ನೆನ್ನೆ ಹಾಗೂ ಇಂದು ನಡೆದ ಆಯ್ಕೆ ಸಮಿತಿಯು ಪ್ರಾಧಿಕಾರದಿಂದ ನೀಡಲಾಗುವ ಇತರ ಪ್ರಶಸ್ತಿಗಳಾದ **ಡಾ. ಎಂ.ಎಂ. ಕಲಬುರಗಿ ಮಾನವಿಕ ಅಧ್ಯಯನ ಪ್ರಶಸ್ತಿಗೆ ಡಾ. ಎಂ. ಚಿದಾನಂದ ಮೂರ್ತಿ** ಅವರನ್ನು ಆಯ್ಕೆ ಮಾಡಿದೆ.

**ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿಗೆ ಕಾರ್ಕಳದ ಪ್ರೊ. ಎಂ. ರಾಮಚಂದ್ರ** ಅವರನ್ನು ಆಯ್ಕೆ ಮಾಡಿದೆ. ಹಾಗೆಯೇ **ಡಾ|| ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ ಸಾಹಿತ್ಯ ಪ್ರಶಸ್ತಿಗೆ ಡಾ|| ವಿಜಯಲಕ್ಷ್ಮಿ ಬಾಳೇಕುಂದ್ರಿ** ಅವರನ್ನು ಆಯ್ಕೆ ಮಾಡಿದೆ ಎಂದು ಅವರು ಹೇಳಿದ್ದಾರೆ.

ಇದಲ್ಲದೆ ಪ್ರಾಧಿಕಾರದ ವತಿಯಿಂದ ನೀಡಲಾಗುವ ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನಗಳಿಗೆ ಕೂಡ ಆಯ್ಕೆ ಮಾಡಲಾಗಿದ್ದು, **ಮೊದಲನೇ ಬಹುಮಾನವನ್ನು ಬಿ. ಜಯರಾಮ ಸಮಕಾಲೀನ ದೃಶ್ಯಕಲೆಯ ಸಾಕ್ಷಿ ಪ್ರಜ್ಞೆ** ಪುಸ್ತಕ ಪಡೆದುಕೊಂಡಿದೆ ಇದನ್ನು ಬೆಂಗಳೂರು ಆರ್ಟ್ ಫೌಂಡೇಷನ್ ಪ್ರಕಟಿಸಿದೆ.

**ಎರಡನೇ ಬಹುಮಾನವನ್ನು ಬಳ್ಳಾರಿಯ ಪಲ್ಲವ ಪ್ರಕಾಶನದ ಪ್ರಕಟಣೆ ಕಾಡುಜೇಡ ಮತ್ತು ಬಾತುಕೋಳಿ ಹೂ** ಕೃತಿ ಪಡೆದುಕೊಂಡಿದೆ. **ಮೂರನೇ**

**ಬಹುಮಾನವನ್ನು ಯಾಜಿ ಪ್ರಕಾಶನದ ಜಾಡಮಾಲಿಯ ಜೀವಕೇಳುವುದಿಲ್ಲ** ಕೃತಿ ಪಡೆದಿದೆ.

**ಮಕ್ಕಳ ಸೊಗಸು ಬಹುಮಾನಕ್ಕೆ ಹೊನ್ನಾವರದ ಪ್ರಣತಿ ಪ್ರಕಾಶನದ ಉಪನಿಷತ್ತು** ಕೃತಿ ಆಯ್ಕೆಯಾಗಿದೆ ಎಂದು ಡಾ. ಎಂ.ಎನ್. ನಂದೀಶ್ ಹಂಚೆ ತಿಳಿಸಿದ್ದಾರೆ.

**ಮುಖಪುಟ ಚಿತ್ರಕ್ಕಾಗಿ ಶ್ರೀ ಚಂದ್ರನಾಥ ಆಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ. ಹಾಗೂ ಮುಖಪುಟ ವಿನ್ಯಾಸಕ್ಕಾಗಿ ಶ್ರೀ ಎಂ.ಎಸ್. ಪ್ರಕಾಶ್‌ಬಾಬು** ಅವರನ್ನು ಆಯ್ಕೆ ಮಾಡಿದೆ. ಇದಲ್ಲದೆ **ಅತ್ಯುತ್ತಮ ಮುದ್ರಣಕ್ಕಾಗಿ ನೀಡಲಾಗುವ ಪ್ರಶಸ್ತಿಗಾಗಿ ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು** ಇವರನ್ನು ಆಯ್ಕೆ ಮಾಡಲಾಗಿದೆ.

ಈ ಎಲ್ಲಾ ಪ್ರಶಸ್ತಿಗಳನ್ನು **ಜನವರಿ 08ರಂದು ಬೆಂಗಳೂರಿನ ನಯನ ರಂಗಮಂದಿರದಲ್ಲಿ** ನಡೆಯುವ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿತರಿಸಲಾಗುವುದೆಂದು ಡಾ. ಎಂ.ಎನ್. ನಂದೀಶ್ ಹಂಚೆ ಹೇಳಿದ್ದಾರೆ.

ಬಹುಮಾನದ ಮೊತ್ತ ಹಾಗೂ ಇತರ ವಿವರ ಕಳಕಂಡಂತಿದೆ.

| ಪ್ರಶಸ್ತಿ ವಿವರ | ಮೊತ್ತ | ಪ್ರಶಸ್ತಿ ವಿಜೇತರು |
|---|---|---|
| **ಅತ್ಯುತ್ತಮ ಪ್ರಕಾಶನ ಪ್ರಶಸ್ತಿ** | **ರೂ.1,00,000-00** | **ಅಭಿನವ ಪ್ರಕಾಶನ** |
| **ಡಾ. ಎಂ. ಎಂ. ಕಲಬುರ್ಗಿ ಮಾನವಿಕ ಅಧ್ಯಯನ ಪ್ರಶಸ್ತಿ** | **ರೂ.75,000-00** | **ಡಾ. ಎಂ. ಚಿದಾನಂದ ಮೂರ್ತಿ** |
| **ಡಾ. ಜಿ.ಪಿ. ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ** | **ರೂ.50,000-00** | **ಪ್ರೊ. ಎಂ. ರಾಮಚಂದ್ರ, ಕಾರ್ಕಳ** |
| **ಡಾ|| ಅನುಪಮಾ ನಿರಂಜನ ವೈದ್ಯಕೀಯ ಹಾಗೂ ವಿಜ್ಞಾನ** | **ರೂ.25,000-00** | **ಡಾ|| ವಿಜಯಲಕ್ಷ್ಮಿ** |

| | | |
|---|---|---|
| ಸಾಹಿತ್ಯ ಪ್ರಶಸ್ತಿ | | ಬಾಳೇಕುಂದ್ರಿ |

**2018ನೇ ಸಾಲಿನ ಪುಸ್ತಕ ಸೊಗಸು ಹಾಗೂ ಮುದ್ರಣ ಸೊಗಸು ಬಹುಮಾನ**

| ಬಹುಮಾನ | ಕೃತಿ | ಪ್ರಕಾಶನ ಸಂಸ್ಥೆ |
|---|---|---|
| ಮೊದಲನೇ ಬಹುಮಾನ<br>**25,000-00** | ಬಿ. ಜಯರಾಂ<br>ಸಮಕಾಲೀನ ದೃಶ್ಯಕಲೆಯ<br>ಸಾಕ್ಷಿಪ್ರಜ್ಞೆ | ಬೆಂಗಳೂರು ಆರ್ಟ್ ಪೌಂಡೇಷನ್<br>ಬೆಂಗಳೂರು |
| ಎರಡನೇ ಬಹುಮಾನ<br>**20,000-00** | ಕಾಡುಜೇಡ ಹಾಗೂ<br>ಬಾತುಕೋಳಿ ಹೂ | ಪಲ್ಲವ ಪ್ರಕಾಶನ, ಬಳ್ಳಾರಿ |
| ಮೂರನೇ ಬಹುಮಾನ<br>**10,000-00** | ಜಾಡಮಾಲಿಯ ಜೀವ<br>ಕೇಳುವುದಿಲ್ಲ...! | ಯಾಜಿ ಪ್ರಕಾಶನ, ಬಳ್ಳಾರಿ<br>ಜಿಲ್ಲೆ |
| ಮಕ್ಕಳ ಪುಸ್ತಕ ಸೊಗಸು<br>ಬಹುಮಾನ<br>**8,000-00** | ಉಪನಿಷತ್ತು | ಪ್ರಣತಿ, ಹೊನ್ನಾವರ |
| ಮುಖಪುಟ ಚಿತ್ರ ವಿನ್ಯಾಸ<br>ಬಹುಮಾನ<br>**10,000-00** | ಮಹಾಭಾರತ<br>ಅನುಸಂಧಾನದ<br>ಭಾರತಯಾತ್ರೆ | ಬಹುಮಾನಿತ ಕಲಾವಿದರು:<br>ಶ್ರೀ ಚಂದ್ರನಾಥ ಆಚಾರ್ಯ |
| ಮುಖಪುಟ ಚಿತ್ರ ಕಲೆಯ | ರನ್ನನ ಕೃತಿರತ್ನ ಪರೀಕ್ಷೆ | ಬಹುಮಾನಿತ ಕಲಾವಿದರು : |

| | | |
|---|---|---|
| ಬಹುಮಾನ<br><br>**8,000-00** | | ಶ್ರೀ ಎಂ.ಎಸ್. ಪ್ರಕಾಶ್‌ಬಾಬು |
| ಪುಸ್ತಕ ಮುದ್ರಣ ಸೊಗಸು<br>ಬಹುಮಾನ<br><br>**5,000-00** | ಅಗ್ನಿಶಿಖೆ<br><br>ಎಂ.ಎನ್. ವ್ಯಾಸರಾವ್<br>ಸಮಗ್ರ ಕಾವ್ಯ | ಮುದ್ರಣಾಲಯ :<br><br>ಲಕ್ಷ್ಮೀ ಮುದ್ರಣಾಲಯ,<br>ಬೆಂಗಳೂರು |

ಪುಸ್ತಕ ಸೊಗಸು ಮತ್ತು ಮುದ್ರಣ ಸೊಗಸು ಆಯ್ಕೆ ಸಮಿತಿಯಲ್ಲಿ ಡಾ. ಎಂ.ಎನ್. ನಂದೀಶ್ ಹಂಚೆ, ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಡಿ. ಮಹೇಂದ್ರ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಜೋಗಿ(ಗಿರೀಶ್ ರಾವ್), ಕೃಷ್ಣರಾಯಚೂರು ಹಾಗೂ ಪ್ರಾಧಿಕಾರದ ಸದಸ್ಯರಾದ ಪ್ರಕಾಶ್ ಕಂಬತ್ತಳ್ಳಿ ಭಾಗವಹಿಸಿದ್ದರು. ವಾರ್ಷಿಕ ಪ್ರಶಸ್ತಿ ಆಯ್ಕೆ ಪ್ರಾಧಿಕಾರದ ಎಲ್ಲಾ ಸದಸ್ಯರ ಉಪಸ್ಥಿತಿಯಲ್ಲಿ ನಡೆಯಿತು.

## ಡಿಸೆಂಬರ್ 21 ರಂದು ಕಾರ್ಮಿಕ ಸಹಾಯವಾಣಿಯ ಉದ್ಘಾಟನೆ

**ಬೆಂಗಳೂರು, ಡಿಸೆಂಬರ್ 18 (ಕರ್ನಾಟಕ ವಾರ್ತೆ) :**

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕಲ್ಯಾಣ ಸುರಕ್ಷಾ ಭವನದ ನಾಲ್ಕನೇ ಮಹಡಿಯಲ್ಲಿ ಕಾರ್ಮಿಕ ಸಚಿವ ಎಸ್. ಸುರೇಶ್ ಕುಮಾರ್ ಅವರು ಡಿಸೆಂಬರ್ 21 ರಂದು ಮಧ್ಯಾಹ್ನ 1.00 ಗಂಟೆಗೆ ಕಾರ್ಮಿಕ ಸಹಾಯವಾಣಿಯ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಅದೇ ದಿನ ಮಧ್ಯಾಹ್ನ 2–00 ಗಂಟೆಯಿಂದ ಸಚಿವರು ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**